ಊರಿನ ಹತ್ತಿರ ಬಂದರೆ ವಾಹನದ ಸದ್ದು ಕೇಳಿಸುತ್ತದೆಯೆಂದು ಕಮಲಕ್ಕ ಇಲ್ಲಿಂದಲೇ ಪರಾರಿಯಾಗಿರಬಹುದಾ ಎನ್ನುವ ಅಪ್ರಿಯ ಯೋಚನೆ ಬೇಡ ಬೇಡವೆಂದುಕೊಂಡರೂ ಮನದೊಳಗೆ ಸುಳಿದುಹೋಯ್ತು. ಕಮಲಕ್ಕ ರಾತ್ರಿಯ ಕಗ್ಗತ್ತಲಲ್ಲಿ, ಜಿಟಿ ಜಿಟಿ ಮಳೆಯಲ್ಲಿ, ಜಾರುತ್ತಾ, ಬೀಳುತ್ತಾ ಇಷ್ಟು ದೂರ ಬರಲು ಹೇಗೆ ಸಾಧ್ಯ? ಹೆಜ್ಜೆ ಗುರುತಿನ ಜಾಡು ಹಿಡಿಯುವುದು ಅಸಾಧ್ಯದ ಮಾತು. ಯಾರ್ಯಾರೋ ನಡೆದು ಹೋಗಿರಬಹುದಾದ ದಾರಿ. ಕೆಸರಲ್ಲಿ ಹೊಂಡ ಬಿದ್ದ ಹೆಜ್ಜೆ ಗುರುತುಗಳೂ ಮಳೆಗೆ ಕಲೆಸಿಹೋಗಿವೆ. ಛೇ, ಮನೆಯಲ್ಲಿ ಅಷ್ಟು ಜನ ಇದ್ದರೂ ಬರೀ ದಂಡಕ್ಕೆ. ಎರಡು ಜೋಡಿ ಗಂಡಹೆಂಡಿರು ಅವರವರ ಕೋಣೆಯಲ್ಲಿ ಕಂಬಳಿ ಮುಸುಕಿನೊಳಗೆ. ವೆಂಕಮ್ಮ ಉಪ್ಪರಿಗೆ ಮೆಟ್ಟಿಲಿನ ಕೆಳಗಿನ ಜಾಗದಲ್ಲಿ ಲೇಪು ಬಿಡಿಸಿಕೊಳ್ಳುತ್ತಿದ್ದರು. ಕಮಲಾ ಮದುವೆಗೆ ಮುಂಚೆ ತನ್ನದಾಗಿದ್ದ ಕೋಣೆಯನ್ನು ಆಮೇಲೆ ಕಾಯಂ ಮಾಡಿಕೊಂಡಿದ್ದಳು. ಯಾವಾಗೆಂದರೆ ಆವಾಗ ಹುಚ್ಚು ಕೆರಳಿದಂತೆ ಸುರಿದು ಹೋಗುವ ಮಳೆಯ ಜೋಗುಳದಲ್ಲಿ ಎಲ್ಲರಿಗೂ ಗಡದ್ದಿನ ನಿದ್ದೆ. ಕಮಲಾ ಎಷ್ಟು ಹೊತ್ತಿಗೆ ಎದ್ದು ಹೋದರೂ ಕೇಳುವವರು ದಿಕ್ಕಿಲ್ಲ. ಎದ್ದು ಹೋಗಿದ್ದಂತೂ ಹೌದು. ಆದರೆ ಎಲ್ಲಿಗೆ? ಮತ್ತೆ ಕೆರೆ, ಬಾವಿ, ನೇಣಿನ ಚಿಂತೆ ಜೊತೆ ಸೇರಿಕೊಂಡಿತು.

ಶಿವರಾಮ ವಾಪಸು ಮನೆಯ ಕಡೆ ಕಾಲೆಳೆದು ಹಾಕುತ್ತಾ ಬರುತ್ತಿದ್ದುದನ್ನು ಕಂಡು ಮುಂಚೇಕಡೆಯ ಮೆಟ್ಟಿಲ ಮೇಲೆ ಚಾತಕಪಕ್ಷಿಯಂತೆ ಕಾಯುತ್ತಾ ಕೂತಿದ್ದ ವೆಂಕಮ್ಮನ ಕಣ್ಣಲ್ಲಿ ಕಣ್ಣೀರು ಧುಮುಕಿತು. ಹುಡುಕಲು ಹೋದವರು ಒಬ್ಬೊಬ್ಬರಾಗಿ ತಾರಮ್ಮಯ್ಯ ಮಾಡುತ್ತಾ ಬಂದರು. ಮನೆಗೆ ನೀರು ಬರುತ್ತಿದ್ದುದು ಗುಡ್ಡದ ಮೇಲಿನ ಕೆರೆಯಿಂದ. ಅಲ್ಲಿಂದ ಕಾಲುವೆ ತೆಗೆದು ಒಂದಷ್ಟು ದೂರ ನೀರು ಹರಿಯುವಂತೆ ಮಾಡಿ ಮುಂದೆ ಅಡಿಕೆಮರದ ದೋಣಿಯಂಥ ಸೀಳುಗಳನ್ನು ಜೋಡಿಸಿ ಮನೆಯ ಹಿತ್ತಲುಕಡೆಯಲ್ಲಿ ನೀರು ಬಂದು ಸುರಿಯುವಂತೆ ಮಾಡಿಕೊಂಡಿದ್ದ ವ್ಯವಸ್ಥೆ. ಆ ಒಗದೆಯಲ್ಲಿ ಪಾತ್ರೆ ತೊಳೆಯುವುದು, ಬಟ್ಟೆ ಒಗೆಯುವುದು, ತೋಟಕ್ಕೆ ಔಷಧಿ ಹೊಡೆದು ಬರುವ ಕೊನೆಗಾರನ ಸ್ನಾನ. ಬಚ್ಚಲಿನ ಗೋಡೆಗೆ ಒಂದು ಕಂಡಿ ಕೊರೆದು ಅಡಕೆದೋಣಿ ಜೋಡಿಸಿ ಬಚ್ಚಲಕಲ್ಲಿನ ಮೇಲೆ ಬಂದು ಬೀಳುವ ಯಥೇಚ್ಛ ನೀರು. ಆ ಕೆರೆಯನ್ನೂ ಶೋಧನೆ ಮಾಡಿ ಬಂದಿದ್ದರು ಆಳುಗಳು. 'ಮಗಳು ಜೀವ ತೆಗೆದುಕೊಂಡಿರಲಿಕ್ಕಿಲ್ಲ' ಎನ್ನುವುದೊಂದು ಸಣ್ಣ ಸಮಾಧಾನ ಹೆತ್ತ ಹೊಟ್ಟೆಗೆ.

ಬೆಳಿಬೆಳಿಗ್ಗೆ ಎದ್ದ ವೆಂಕಮ್ಮ ಮುಂಚೇಕಡೆಯ ಬಾಗಿಲಿಗೆ ಅಗುಳಿ ಹಾಕದೆ ಹಾಗೆಯೇ ಸರಿದಿಟ್ಟಿದ್ದನ್ನು ನೋಡಿ ರಾತ್ರಿ ಅಗುಳಿ ಹಾಕಲು ಮರೆತಿರಬೇಕು ಅಂದುಕೊಂಡಿದ್ದರೇ ವಿನಾ ಹೀಗೊಂದು ನಡೆಯಬಾರದ ಘಟನೆ ನಡೆದುಹೋಗಿದೆ ಅಂದುಕೊಂಡಿರಲಿಲ್ಲ. ಕಮಲಾ ಜೀವ ತೆಗೆದುಕೊಂಡಿರಬಹುದೆನ್ನುವ ಸುಳಿವು ಎಲ್ಲೂ ಕಾಣಿಸದೆ ಅವಳ ಕಣ್ಮರೆ ಅನ್ನುವುದು ಲೋಕದ ಕಣ್ಣಲ್ಲಿ ನಿಗೂಢವಾಗಿ ಉಳಿದುಹೋಯ್ತು. ಕಣ್ಣು ಕಾಣದಲ್ಲೆಲ್ಲೋ ಹೋಗಿ ಜೀವ ತೆಗೆದುಕೊಂಡಿದ್ದಾಳೆ ಎಂದು ಪರಿಚಯದ ಜನ ಮಾತಾಡಿಕೊಂಡು ಲೊಚಗುಟ್ಟಿದರು. ಪೊಲೀಸು, ಕಂಪ್ಲೇಂಟು ಅನ್ನುವುದೆಲ್ಲಾ ಚಲಾವಣೆಯಲ್ಲಿರದಿದ್ದ ಕಾಲಮಾನದಲ್ಲಿ ತಂತಮ್ಮ ಮೂಗಿನ ನೇರಕ್ಕೆ ಯೋಚಿಸುವುದು ಸಹಜ ಕೂಡಾ ಆಗಿತ್ತು. ಸುದ್ದಿ ಗೊತ್ತಾಗಿ ಪರಿಚಿತರು, ನೆಂಟರು ಬಂದು ಮಾತಾಡಿಸಿಕೊಂಡು ಸಹಾನುಭೂತಿ ತೋರಿಸಿ ಹೋದರು. ವೆಂಕಮ್ಮನ ಕಣ್ಣ ನೀರು ಬತ್ತಿ ಹೋಗಿ ಸೀತಾಲಕ್ಷ್ಮಿಯ ಬಲವಂತಕ್ಕೆ ಹೊಟ್ಟೆಗೆ ನಾಲ್ಕು ತುತ್ತು ಕೂಳು ಬೀಳುವಂತಾಯ್ತು. ಅತ್ತೆ ತುತ್ತು ಎತ್ತುವವರೆಗೆ ತಾನೂ ಉಪವಾಸ ಕೂತು ಅವರನ್ನು ಮಣಿಸಿದ್ದಳು ಸೀತಾಲಕ್ಷ್ಮಿ. ಅವನೊಬ್ಬ ಮಾತ್ರ ಉರ ಉರ ಉರ ಉರಿದು ಬೀಳುತ್ತಿದ್ದ, ಶಿವರಾಮ. 'ಅವಳ ಗಂಡನ ಮನೆಯೋರು ಹೇಳ್ತಿದ್ದಿದ್ದು ಸತ್ಯ ಕಣೇ. ಅವತ್ತೇ ಹಿಡಿದು ಅವಳ ತಲೆ ಬೋಳಿಸಿದ್ರೆ ಮೂಲೇಲಿ ಬಿದ್ದಿರ್ತಿದ್ಲು. ಯಾವುದಕ್ಕೂ ಒಂದು ವಯಸ್ಸು ಅಂತ ಇರಲ್ವಾ? ಈ ವಯಸ್ಸಲ್ಲಿ ಇವಳಿಗೇನು ಬಂತು ಕೇಡುಗಾಲ?' ಅದೊಂದು ದಿನ ಏಕಾಂತದಲ್ಲಿ ಸೀತಾಲಕ್ಷ್ಮಿಯ ಹತ್ತಿರ ತನ್ನ ಒಳಗುದಿ ಕಾರಿಕೊಂಡಿದ್ದ ಶಿವರಾಮ.

'ಅದೆಂತಕ್ಕೆ ಅಪದ್ಧ ಮಾತಾಡ್ತೀರಿ? ಅತ್ತಿಗೆ ಏನಾದ್ರೋ, ಎಂತಾ ಕತೇನೋ ಅಂತ ಕೊರಗಿ ಸಾಯ್ತಿದೀವಿ ನಾವು' ಸೀತಾಲಕ್ಷ್ಮಿ ಕಣ್ಣೊರೆಸಿಕೊಂಡಿದ್ದಳು.

'ಎಂತಾ ಕತೇನೂ ಇಲ್ಲ. ಯಾವನ ಹಿಂದೋ ಓಡಿ ಹೋಗಿದಾಳೆ ನಿನ್ನ ಅತ್ತಿಗೆ...'

ಬೆಚ್ಚಿ ಬಿದ್ದಿದ್ದಳು ಸೀತಾಲಕ್ಷ್ಮಿ.

'ಸುಮ್ನುಮ್ನೆ ಅಪವಾದ ಹೊರಿಸ್ಬೇಡಿ ಕಣ್ರೀ. ದೇವರು ಮೆಚ್ಚಲ್ಲ...' ಅಂದಿದ್ದಳು.

ಅವತ್ತು ವಾಹನದ ಚಕ್ರದ ಗುರುತನ್ನು ನೋಡಿ ಬಂದಿದ್ದ ರಹಸ್ಯ ಬಿಚ್ಚಿಕೊಂಡಿತ್ತು. ಅಷ್ಟು ಮಾತ್ರವಲ್ಲ, ಸೇರೇಗಾರರ ಕೈಯಲ್ಲಿ ಹೊಸ ಬ್ಯಾಟರಿ ಗಮನಿಸಿದ ಗುಟ್ಟೂ.

'ಬಾಯಿ ಬಿಟ್ಟು ಕೇಳ್ಬೇಕಿತ್ತು...'

'ಕೇಳಿದ್ರೆ ಹೇಳ್ಬಿಡ್ತಾರಾ? ಹಾಳಾಗಿತ್ತು, ಹೊಸ್ತು ತಗಂಡೆ ಅಂತ ತಿಪ್ಪೆ ಸಾರಿಸಿದ್ರೆ ಮುಗೀತಲ್ಲ? ಅಕ್ಕ ಹೋದ ನಾಕೇ ದಿನಕ್ಕೆ ಅರ್ಜೆಂಟಾಗಿ ಊರಿಗೆ ಹೋಗ್ಬರ್ಬೇಕು ಅಂತ ಸೇರೇಗಾರರು ಊರಿಗೆ ಎದ್ದಿದ್ದು ಮತ್ಯಾತಕ್ಕೆ? ಯಾರೋ ಬೇಕಾದೋರ ಜೊತೆ ಮಾಡಿ ಸಾಗ ಹಾಕಿರ್ತಾರೆ...'

'ನಾ ನಂಬಲ್ಲ...' ಅಂದಳು ಸೀತಾಲಕ್ಷ್ಮಿ. ಅದು ತುದಿನಾಲಿಗೆಯ ಮಾತು ಎಂದು ಅವಳ ಅಂತರ್ಯವೇ ಹೇಳಿತು. ಅದೊಂದು ದಿನ ಮಲ್ಲಿಗೆ ದಂಡೆಯಲ್ಲಿ ಕಂಡು ಬಂದಿದ್ದ ನೀಳ್ಗೂದಲಿನ ನೆನಪಾಯ್ತು. ಹೂ ಮುಡಿದು ಸಿಂಗಾರವಾಗಿ ಯಾರನ್ನೋ ಅರಸಿಕೊಂಡು ಹೋಗಿದ್ದರೇ ಅತ್ತಿಗೆ? ಅಥವಾ ಆಸೆಗೆ ಹೂ ಮುಡಿದು ಮತ್ತೆ ಅಲ್ಲೇ ತೆಗೆದಿಟ್ಟಿದ್ದರೇ? ಯಾವಾಗಿನಿಂದ ನಡೆಯುತ್ತಿತ್ತೋ ಈ ಕೂಟ? ಬೇಟ? ನಿಜಕ್ಕೂ ನಡೆಯುತ್ತಿತ್ತೇ? ನಡೆದಿದ್ದರೆ ಆಶ್ಚರ್ಯವೇನಿಲ್ಲ. ಅತ್ತಿಗೆಗೆ ಯಾವ ಮಹಾ ವಯಸ್ಸು? ಮೂವತ್ತೂ ತುಂಬಿಲ್ಲ. ಎಂತೆಂಥಾ ಋಷಿ ಮುನಿಗಳಿಗೇ ಕಾಮವನ್ನು ಗೆಲ್ಲಲು ಅಸಾಧ್ಯವಾಗಿರುವಾಗ ಉಪ್ಪು, ಹುಳಿ, ಖಾರ ತಿನ್ನುವ ಕಮಲತ್ತಿಗೆ ಕಾಲು ಜಾರಿದ್ದರೆ ಆಶ್ಚರ್ಯವಲ್ಲ, ಅಪರಾಧವೂ ಅಲ್ಲ ಎಂದಿತು ಸೀತಾಲಕ್ಷ್ಮಿಯ ಅಂತರಂಗ. ಆದರೆ ಅದನ್ನು ಬಾಯಿ ಬಿಟ್ಟು ಗಂಡನೊಡನೆ ಹೇಳುವ ಧೈರ್ಯವಾಗಲಿಲ್ಲ.

ಕೆಲವೊಂದು ಗುಟ್ಟುಗಳನ್ನು ಯಾರೋ ಆತ್ಮೀಯರಾದವರಲ್ಲಿ ಹಂಚಿಕೊಳ್ಳದಿದ್ದರೆ ಹೊಟ್ಟೆ ಉಬ್ಬರಿಸಿ, 'ಇನ್ನು ತಡೆದುಕೊಳ್ಳುವುದು ಸಾಧ್ಯವೇ ಇಲ್ಲ' ಅನ್ನಿಸಿ ಬಿಡುತ್ತದೆ. ಪ್ರತೀಕಾರ ತೆಗೆದುಕೊಳ್ಳಲು ಸಾಧ್ಯವಾಗದ ಗುಟ್ಟುಗಳಂತೂ ಪ್ರಾಣವನ್ನೇ ಹಿಂಡಿಬಿಡುತ್ತವೆ. ಮಡದಿಗಿಂತ ಆತ್ಮೀಯರು ಮತ್ಯಾರು? ಯಾವುದೋ ಒಂದು ದುರ್ಬಲ ಗಳಿಗೆಯಲ್ಲಿ ಒಡಲಲ್ಲಿದ್ದುದನ್ನು ಕಾರಿಕೊಂಡ ಶಿವರಾಮನಿಗೆ ನಂತರ ತಪ್ಪು ಮಾಡಿದೆ ಅನ್ನಿಸಿರಬೇಕು, ಹೆಂಗಸರ ಹೊಟ್ಟೆಯಲ್ಲಿ ಗುಟ್ಟು ನಿಲ್ಲುವುದಿಲ್ಲ ಎನ್ನುವ ಗಟ್ಟಿ ನಂಬುಗೆ ಅವನದ್ದೂ. ಅದರಲ್ಲೂ ತೌರುಮನೆಯವರ ಜೊತೆ, ಕೊನೆಗೆ ತಾಯಿಯ ಜೊತೆಗಾದರೂ 'ಯಾರಿಗೂ ಹೇಳ್ಬೇಡ' ಅನ್ನುತ್ತಲೇ ಹೆಂಡತಿ ಎಲ್ಲವನ್ನೂ ಹೇಳಿಕೊಳ್ಳಬಹುದಾದ ಸಂಭವ ನೆನೆದು ಶಿವರಾಮ ತಲ್ಲಣಿಸಿದ.

'ಯಾರ ಹತ್ರನೂ ಬಾಯ್ಬಿಡ್ಬಾರ್ದು ನೀನು. ಮನೆ ಮರ್ಯಾದೆ ಪ್ರಶ್ನೆ, ಗೊತ್ತಲ್ಲ? ಭಾಷೆ ಕೊಡು...' ಎನ್ನುತ್ತಾ ಬಲಗೈ ಮುಂದೆ ಚಾಚಿದ್ದ. ಅವನ ಚಾಚಿದ ಕೈಮೇಲೆ ತನ್ನ ಕೈ ಇಟ್ಟು ಒತ್ತಿದ ಸೀತಾಲಕ್ಷ್ಮಿಗೆ ಗಂಡ ತನ್ನ ಅಂತರಂಗವನ್ನು ತೆರೆದಿಡುವಷ್ಟು ಹತ್ತಿರವಾಗಿಬಿಟ್ಟ ಎನ್ನುವ ಅನಿಸಿಕೆಯಿಂದ ರೋಮಾಂಚನವಾಯ್ತು.

'ಭಾಷೆ ಕೊಟ್ಟಿದ್ದಿ ಮತ್ತೆ. ಮೀರಿ ಹೋದೆ ಅಂದ್ರೆ ನನ್ನ ಕೊಂದು ತಿಂದ ಪಾಪ ನಿಂಗೆ...'

'ಥೋ, ಅಪದ್ಧ ಆಡ್ಬೇಡಿ. ನನ್ಮೇಲೆ ಅಷ್ಟೂ ನಂಬಿಕೆ ಇಲ್ವಾ?' ಅಂದಳು ಸೀತಾಲಕ್ಷ್ಮಿ.

ಎಷ್ಟೋ ದಿನಗಳ ಮೇಲೆ ಅವತ್ತು ಅವಳಿಗೆ ದುಃಸ್ವಪ್ನಗಳಿಲ್ಲದ ಸೊಗಸಾದ ನಿದ್ದೆ ಬಂತು. ಇದರ ಹಿಂದೆ ಕೆಲಸ ಮಾಡಿದ್ದು 'ಕಮಲತ್ತಿಗೆ ಬದುಕಿದ್ದಾರೆ' ಎನ್ನುವ ಸಮಾಧಾನ ತಂದುಕೊಟ್ಟ ನಿರಾಳತೆ. ಹೆಂಡತಿ ಸತ್ತ ವರ್ಷದೊಳಗೆ ಗಂಡ ಮದುವೆಯಾಗಬೇಕು ಅನ್ನುತ್ತದೆಯಂತೆ ಶಾಸ್ತ್ರ. ಹೆಂಡತಿ ಮಾತ್ರ ತಲೆ ಬೋಳಿಸಿಕೊಂಡು, ಒಪ್ಪತ್ತೂಟ ಉಂಡುಕೊಂಡು, ಮನೆಯವರ ಬಿಟ್ಟಿ ಚಾಕರಿ ಮಾಡುತ್ತಾ ಬಿದ್ದಿರಬೇಕಂತೆ. ನ್ಯಾಯ ಎನ್ನುವುದು ಇಷ್ಟು ಕುರುಡಾಗಿದೆಯಾ ಎಂದು ಅವಳಿಗೆ ಯಾವತ್ತೋ ಅನ್ನಿಸಿತ್ತು. ಮನಸ್ಸಿನ ಒಳಮೂಲೆಯಲ್ಲಿ 'ಕಮಲತ್ತಿಗೆ ಸುಖವಾಗಿರಲಿ' ಎನ್ನುವ ಹಾರೈಕೆಯೊಂದಿಗೆ ಬೆಚ್ಚನೆಯ ನಿದ್ದೆ. ಈ ನಿದ್ದೆಯಲ್ಲೂ ಗಂಡನ ಊಹೆ ಸರಿದಾರಿ ಹಿಡಿದಿರಬಹುದಾ ಅಥವಾ ದಿಕ್ಕು ತಪ್ಪಿರಬಹುದಾ ಎನ್ನುವ ಕುಟುಕು ಸಂದೇಹ. ಸರಿದಾರಿ ಹಿಡಿದಿರಲಿ ಎನ್ನುವ ಆಶಯ.

***

ಊರಿಗೆ ಹೋದ ಸೇರೇಗಾರರಿಗೆ ಅಲ್ಲಿ ಹುಷಾರು ತಪ್ಪಿತು ಎನ್ನುವ ಸುದ್ದಿ. 'ಕಾಮಾಲೆಯಂತೆ' ಎನ್ನುವ ಪುಕಾರು. 'ಉಸಿರು